ಮೈಸೂರು ನಗರದ ಅನಧಿಕೃತ ಬಡಾವಣೆಗಳ ಅಭಿವೃದ್ಧಿ

327 (87) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ಯಾವ ಯಾವ ಅನಧಿಕೃತ ಬಡಾವಣೆಗಳಿಂದ ಎಷ್ಟೆಷ್ಟು ಅಭಿವೃದ್ಧಿ ಶುಲ್ಕವನ್ನು ಇದುವರೆಗೆ ಪಾವತಿಸಿಕೊಳ್ಳಲಾಗಿದೆ?

ಆ) ಸದರಿ ಹಣವನ್ನು ಆಯಾಯಾ ಬಡಾವಣೆಗಳ ನಾಗರೀಕ ಸೌಲಭ್ಯಗಳಿಗಾಗಿಯೇ ಉಪಯೋಗಿಸಲಾಗಿದೆಯೇ? ಹಾಗಿದ್ದಲ್ಲಿ ಯಾವ ಯಾವ ಕೆಲಸಗಳಿಗೆ ಎಷ್ಟೆಷ್ಟು ಹಣ ವಿನಿಯೋಗಿಸಲಾಗಿದೆ? ವಿವರ ಒದಗಿಸುವುದು.

ಇ) ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ಅನಧಿಕೃತ ಬಡಾವಣೆಗಳಿಂದ ಅಭಿವೃದ್ಧಿ ಶುಲ್ಕವನ್ನು ಈ ಕೆಳಕಂಡಂತೆ ವಸೂಲು ಮಾಡಲಾಗಿದೆ.

1.	ಖಿಲ್ಲೆ ಮೊಹಲ್ಲಾ	22,00,098-00
2.	ನಜರ್‌ಬಾದ್ ಮೊಹಲ್ಲಾ	1,77,84,842-00
3.	ಚಾಮರಾಜ ಮೊಹಲ್ಲಾ	50,68,584-00
4.	ದೇವರಾಜ ಮೊಹಲ್ಲಾ	1,04,04,447-00
5.	ಮಂಡಿ ಮೊಹಲ್ಲಾ	1,66,500-00
6.	ಲಷ್ಕರ್ ಮೊಹಲ್ಲಾ	13,23,574-00
	ಒಟ್ಟು	**3,69,48,045-00**

ಆ) ಸದರಿ ಹಣವನ್ನು ಆಯಾ ಬಡಾವಣೆಗಳ ನಾಗರೀಕ ಸೌಲಭ್ಯಗಳಿಗಾಗಿಯೇ ಉಪಯೋಗಿಸಲಾಗಿದೆ.

		(ರೂ. ಲಕ್ಷಗಳಲ್ಲಿ)
1.	ರಸ್ತೆಗಳಿಗೆ	67.80
2.	ಒಳಚರಂಡಿ	147.11
3.	ರಸ್ತೆ ಬದಿಯ ಚರಂಡಿಗಳಿಗಾಗಿ	127.47
4.	ಕುಡಿಯುವ ನೀರಿನ ಸೌಲಭ್ಯಕ್ಕಾಗಿ	139.06
5.	ಇತರೆ ಕೆಲಸಗಳು- ಬೀದಿ ದೀಪ, ಚಪ್ಪಡಿ, ಪೇವಿಂಗ್ ವಗೈರೆ	34.97
	ಒಟ್ಟು	**516.41**

ಇ) ಉದ್ಭವಿಸುವುದಿಲ್ಲ